# <u>ಸಕಲ ದುರಿತಗಳ ಪರಿಹಾರ ಮಾಡಿದ್ಯೊ</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Note:** Lyrics in both the above references are fully matching. Singer has followed these wordings.

ರಾಗ: ಸೌರಾಷ್ಟ್ರ ತಾಳ: ಅಟ

ಸಕಲ ದುರಿತಗಳ ಪರಿಹಾರ ಮಾಡಿದ್ಯೊ ವೆಂಕಟೇಶ || ಪ ||
ಭಕುತಿಗೊಲಿದು ಬಂದು ಭಕ್ತರ ಕಾಯ್ದ್ಯೊ ವೆಂಕಟೇಶ || ಅಪ ||

ಮತ್ಸ್ಯಾವತಾರದಿ ನಾಲ್ಕು ವೇದವ ತಂದ್ಯೊ ವೆಂಕಟೇಶ
ಪೃಥ್ವೀಧರವ ಪೊತ್ತು ಭೃತ್ಯರ ನೀ ಕಾಯ್ದ್ಯೊ ವೆಂಕಟೇಶ || 1 ||

ಧರೆಯನೊಯ್ದನ ಕೋರೆದಾಡೆಯಿಂದಲಿ ಕೊಂದ್ಯೋ ವೆಂಕಟೇಶ
ತರಳಗೊಲಿದು ನೀ ಕಂಭದಿಂದಲಿ ಬಂದ್ಯೊ ವೆಂಕಟೇಶ || 2 ||

ಭೂಮಿ ದಾನವ ನೀಡಿದವನ ಬಾಗಿಲ ಕಾಯ್ದ್ಯೊ ವೆಂಕಟೇಶ
ಭೂಮಿ ಪಾಲರನಳಿದು ಭಾರ್ಗವನೆನಿಸಿದ್ಯೊ ವೆಂಕಟೇಶ || 3 ||

ದಶಶಿರನನು ಕುಟ್ಟಿ ಶಶಿಮುಖಿಯಳ ತಂದ್ಯೊ ವೆಂಕಟೇಶ
ಅಸುರೆಯ ಸಂಹರಿಸಿ ಕಂಸನ ಮಡುಹಿದ್ಯೊ ವೆಂಕಟೇಶ || 4 ||

ಅಧಮ ಜನರಿಗೆ ಬೋಧಿಸಿ ಬತ್ತಲೆ ನಿಂತ್ಯೊ ವೇಂಕಟೇಶ
ಕುದುರೆಯೇರಿ ಕಲ್ಕಿ ರೂಪವ ತಾಳ್ದ್ಯೋ ವೆಂಕಟೇಶ || 5 ||

ಹರಿದಾಸರ ಮೇಲೆ ಒಲಿದು ಬೇಗನೆ ಬಂದ್ಯೊ ವೆಂಕಟೇಶ

ವರದ ಪುರಂದರ ವಿಠಲ ನಮೋ ನಮೋ ವೆಂಕಟೇಶ || 6 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು**:

ಇಲ್ಲಿ ದಶಾವತಾರದ ಒಕ್ಕಣೆಯಿದೆ.

**ಪೃಥ್ವೀಧರವ** – ಬೆಟ್ಟವನ್ನು, ಮಂದರಪರ್ವತವನ್ನು (ಕೂರ್ಮಾವತಾರದಲ್ಲಿ).

**ಧರೆಯನೊಯ್ದನ**... (ವರಾಹಾವತಾರದಲ್ಲಿ).

**ತರಳಗೊಲಿದು**...– (ನರಸಿಂಹಾವತಾರದಲ್ಲಿ).

**ಭೂಮಿದಾನವ**... – (ವಾಮನಾವತಾರದಲ್ಲಿ).

**ಭೂಮಿಪಾಲರ**... – (ಪರಶುರಾಮಾವತಾರದಲ್ಲಿ).

**ದಶಶಿರನನು**... – (ರಾಮಾವತಾರದಲ್ಲಿ).

**ಅಸುರೆಯ**... – ಪೂತನಿಯನ್ನು (ಕೃಷ್ಣಾವತಾರದಲ್ಲಿ).

**ಅಧಮಜನರಿಗೆ**... – (ಬೌದ್ಧಾವತಾರದಲ್ಲಿ).

**Classification:** Keerthane
**Ankita:** varada purandara vittala
**Location:** Tirupati
**Category:** Srinivasa Stuti, Dashavatara
**Sub-Category:** srinivasa, hari sarvottama, dashavatara, bhumi, veda, asura, kamsa, Krishna, kudure,
**Pravachana:** NA
**Explanation:** NA